**ಮ.9 ಮತ್ತು 10 ರ ಆದೇಶದ ಅನ್ವಯ ದಿನಾಂಕಃ 05.06.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಆರ್ .ಬಿ.ಆರ್ ರವರಿಂದಃ**

**2** ನೇ ವಾದಿ ಲೋಕೇಶ್ ನನ್ನ ತಮ್ಮ. **2** ನೇ ವಾದಿ ದಿಃ**11.04.2015** ರಂದು ಮರಣ ಹೊಂದಿರುತ್ತಾರೆ. **2** ನೇ ವಾದಿಗೆ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ನನಗೆ ದಾವಾ ಸ್ವತ್ತಿನ ನಂಬರನ್ನು ಹೇಳಲು ಆಗುವುದಿಲ್ಲ. ದಾವಾ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ -ರಾಮಣ್ಣ ಸ್ವತ್ತು, ಪಶ್ಚಿಮಕ್ಕೆ ಮೋಟಪ್ಪನ ಸ್ವತ್ತು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಮೋಟಪ್ಪನ ಸ್ವತ್ತು. ದಾವಾ ಸ್ವತ್ತು ನನ್ನ ತಾಯಿಯ ತಂದೆಯು ಮುನಿಮಾರಪ್ಪ ಎಂಬುವರಿಂದ ಖರೀದಿಸಿರುತ್ತಾರೆ. ದಾವಾ ಸ್ವತ್ತನ್ನು ಸುಮಾರು **60** ವರ್ಷ ಪೂರ್ವದಲ್ಲಿ ನನ್ನ ತಾಯಿಯ ತಂದೆ ಖರೀದಿಸಿರುತ್ತಾರೆ. ದಾವಾ ಸ್ವತ್ತಿನ ವಿ. **75 x 150** ಅಡಿ. ಅದರ ಪೈಕಿ **100** ಅಡಿ ಅಷ್ಟು ಮನೆ ಕಟ್ಟಿಕೊಂಡಿರುತ್ತೇನೆ ಉಳಿಕೆ ಖಾಲಿ ಇರುತ್ತದೆ. ದಾವಾ ಸ್ವತ್ತಿನಲ್ಲಿ ಸುಮಾರು **100** ಅಡಿ ವಿಸ್ತೀರ್ಣದಲ್ಲಿ ಮನೆ ಕಟ್ಟಿಕೊಂಡಿರುವ ಬಗ್ಗೆ ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ನಿಪಿ-**2** ಕ್ರಯ ಪತ್ರ ದಂತೆ ಚಿಕ್ಕ ಹುಚ್ಚಮ್ಮ ಎನ್ನುವವರು ದಾವಾ ಸ್ವತ್ತನ್ನು ಹೊರತು ಪಡಿಸಿ ಬೇರೆ ಕಡೆ ಸ್ವತ್ತನ್ನು ಖರೀದಿಸಿದ ಬಗ್ಗೆ ಉಲ್ಲೇಖ ಇರುತ್ತದೆ. ನಿಪಿ-**2** ಕ್ರಯ ಪತ್ರ ದಾವಾ ಸ್ವತ್ತಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ತಂದೆಯ ಹೆಸರು ಚಿಕ್ಕಕುಳ್ಳಪ್ಪ . ನನ್ನ ತಾಯಿಯ ಹೆಸರು ಚಿಕ್ಕಗುರಮ್ಮ. ದಾವಾ ಸ್ವತ್ತನ್ನು ನನ್ನ ತಾಯಿ ಖರೀದಿಸಿರುತ್ತಾರೆ. ಸದರಿ ಖರೀದಿಗೆ ಸಂಬ್ಬಂಧಿಸಿದ ಕ್ರಯ ಪತ್ರವನ್ನು

ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದಾವಾ ಸ್ವತ್ತನ್ನು ಸರ್ಕಾರದವರು ರಸ್ತೆಗಾಗಲಿ ಅಥವಾ ಲೇಔಟ್ ಮಾಡಲು ಭೂ ಸ್ವಾಧೀನ ಪಡಿಸಿಕೊಂಡಿಲ್ಲ. ನಿಪಿ-**2** ಕ್ರದಯ ಪತ್ರದಲ್ಲಿ ದಾವಾ ಸ್ವತ್ತಿನ ಪೂರ್ವ ಪಶ್ಚಿಮ ಉದ್ದ **150** ಅ ಡಿ ಎನ್ನುವ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ನಿಪಿ-**2** ಕ್ರಯ ಪತ್ರದಲ್ಲಿ ಉತ್ತರ ದಕ್ಷಿಣ **70** ಅಡಿ ಎನ್ನುವ ಉಲ್ಲೇಖ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-**2** ಕ್ರಯ ಪತ್ರದಲ್ಲಿ ಪೂರ್ವಕ್ಕೆ ತಮ್ಮಣ್ಣ ರಾಮಯ್ಯನ ಖಾಲಿ ಜಮೀನು ಪ-ಮೋಟಪ್ಪನ ಖಾಲಿ ಜಾಗ, ಉ- ಮುನಿಸ್ವಾಮಿ, ದ- ಮುನಿಸ್ವಾಮಿ ಮನೆ ಎಂದರೆ ಸಾಕ್ಷಿಯು ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಮೋಟಪ್ಪನ ಜಮೀನು ಇರುತ್ತದೆ ಎಂದು ುಡಿಯುತ್ತಾರೆ. ದಾವಾ ಸ್ವತ್ತಿನ ಉತ್ತರಕ್ಕೆ  ರಸ್ತೆ ಇರುವ ಬಗ್ಗೆ ನಿಪಿ-**2** ಕ್ರಯ ಪತ್ರದಲ್ಲಿ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-**3** ಋಣಬಾರ  ಪತ್ರದಲ್ಲಿ ದಾವಾ ಸ್ವತ್ತಿನ  **70** ಅಡಿ ಚೆಕ್ಕುಬಂದಿ ಸಹ ನಮುದಾಗಿಲ್ಲ ಎಂದರೆ ಸರಿಯಲ್ಲ. ನಿಪಿ-**4** ಮತ್ತು **5**  ಋಣಬಾರ  ರಾಹಿತ್ಯ  ಪತ್ರದಲ್ಲಿ ಮುನಿಸ್ವಾಮಿ ರವರ ಸ್ವತ್ತು ಎಂದು ನಮುದಿಸಿರುತ್ತದೆ ಎಂದರೆ ಸರಿಯಲ್ಲ.  ನಾನು ನಿಪಿ-**7** ರಂತೆ ಒಂದು ದಾವೆಯನ್ನು ದಾವಾ ಸ್ವತ್ತಿಗೆ ಸಂಬಂಧಿಸಿ ರಂಗಪ್ಪ, ರಘು ರವರ ವಿರುದ್ಧ ಸಲ್ಲಿಸಿದ್ದೆ. ನಿಪಿ-**7** ದಾವಾ ಪತ್ರದಲ್ಲಿ ದಾವಾ ಸ್ವತ್ತಿನ ಹಳೆಯ ಸಂ.**150** ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ದಾವಾ ಸ್ವತ್ತಿನ ನಂ.**159** ಎಂದು ಹೇಳಿ ಬರೆಸಿರುತೀರಾ ಎಂದರೆ ಸಾಕ್ಷಿಯು ನಮ್ಮ ವಕೀಲರು ಬರೆದಿರುತ್ತಾರೆ ಎಂದು  ಹೇಳುತ್ತಾರೆ. ನಿಪಿ-**7** ದಾವಾ ಪತ್ರದಲ್ಲಿ ದಾವಾ ಸ್ವತ್ತಿನ ಉತ್ತರಕ್ಕೆ ಬೇರೆಯವರ ಸ್ವತ್ತು ಇರುತ್ತದೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸಾಕ್ಷಿಯು ರಸ್ತೆಯ ನಂತರ ಇರುತ್ತದೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಹೊಸ ನಂ.**1272** ಎಂದು ಮರು ಸಂಖ್ಯೆ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ. ದಾವಾ ಸ್ವತ್ತಿನ ಪೂರ್ವ ಪಶ್ಚಿಮ ಅಳತೆ **150** ಅಡಿ ಇರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ಈ ಪ್ರಕರಣವನ್ನು ಸೇರಿದಂತೆ ಒಟ್ಟು **2** ಪ್ರಕರಣವನ್ನು ನಾನು ಹೂಡಿರುತ್ತೇನೆ. ದಾವಾ ಸ್ವತ್ತು ನನ್ನ ತಾಯಿಯ ಹೆಸರಿಗೆ ಖಾತೆ ಆಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿ ನಾನು ಯಾವುದೇ ಖಾತೆ ಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-**10** ರಿಂದ **12** ದಾಖಲೆಯಲ್ಲಿ ದಾವಾ ಸ್ವತ್ತಿನ ನಂಬರ್ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-**10** ರಿಂದ **12** ಫಿರ್ಯಾದಿನಲ್ಲಿ ದಾವಾ ಸ್ವತ್ತಿನ ಉತ್ತರ ಭಾಗಕ್ಕೆ ಬೇರೆಯವರ ಸ್ವತ್ತು ಎಂದು ಉಲ್ಲೇಖಿಸಲಾಗಿದೆ ರಸ್ತೆಯ ನಂತರ ಬೇರೆಯವರ ಸ್ವತ್ತು ಇರುತ್ತದೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ರಸ್ತೆಯ ನಂತರ ಬೇರೆಯವರ ಸ್ವತ್ತು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-**18** ರಿಂದ **21** ಪೊಟೋಗಳನ್ನು ಪೊಟೋಗ್ರಾಫರ್ ತೆಗೆದಿರುತ್ತಾರೆ. ಪೋಟೋ ಗ್ರಾಫರ್ ನಿಂದ ನಾನು ಪೊಟೋ ಕ್ಕೆ ಸಂಬಂಧಿಸಿ ಕಲಂ **65** ಬಿ ಸರ್ಟಿಫಿಕೇಟನ್ನು ಹಾಕಿಸಿಲ್ಲ. ನಿಪಿ-**26** ದಾಖಲೆ ಯಲ್ಲಿ ನಮುದಿತ ಸ್ವತ್ತಿನ ಸಂಖ್ಯೆಗೂ ದಾವಾ ಸ್ವತ್ತಿನ ಸಂಖ್ಯೆಗೂ ತಾಲೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿ ಪ್ರಸ್ತುತ ದಿನಾಂಕವರೆಗೂ ಯಾವುದೇ ಖಾತಾ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಿ.**10.10.2013** ರಂದು ಘಟನೆಗೆ ಸಂಬ್ಬಂಧಿಸಿದಂತೆ

ನಾನು ಪೊಲೀಸ್ ಠಾಣೆಯಲ್ಲಿ ಫಿರ್ಯಾದನ್ನು ದಾಖಲಿಸಿರುತ್ತೇನೆ. ನಿಪಿ-**9** ರಿಂದ **12** ಫಿರ್ಯಾದು ದಿಃ**10.10.2013** ಘಟನೆಗೆ ಸಂಬ್ಬಂಧಿಸಿದಂತೆ ನೀಡಿದಂತಹ ಫಿರ್ಯಾದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಿಕ್ಕಗುರಮ್ಮ ಮಗ ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಿಪಿ-**7** ಪ್ರಕರಣದಲ್ಲಿ ಬಂದಿರುವ ತೀರ್ಪು ಎಕಪಕ್ಷಿಯ ತೀರ್ಪು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಪ್ರತಿವಾದಿಗಳು ವಡ್ರಪಾಳ್ಯ ಗ್ರಾಮ ಠಾಣಾದಲ್ಲಿ ಇರುವ ಸುಮಾರು **9** ಖಾಲಿ ನಿವೇಶನವನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸೈಟ್ ನಂ.**187/1** ಎನ್ನುವ ಸೈಟ್ ?ನ್ನದು ಅಲ್ಲದಿದ್ದರು ಸಹ ಸೈಟ್ ನಂ. **187/1** ದಾವಾ ಸ್ವತ್ತು ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಡ್ರಪಾಳ್ಯ ಗ್ರಾಮಕ್ಕೆ ಗ್ರಾಮ ಠಾಣಾ ಇರುತ್ತದೆ. ಸದರಿ ಗ್ರಾಮ ಠಾಣಾದಲ್ಲಿ ಸೈಟ್ ಗಳು ಸಹ ಇರುತ್ತದೆ ಆದರೆ ಪ್ರತಿವಾದಿಗಳು ಸೈಟ್ ಗಳನ್ನು ಹೊಂದಿರುವುದಿಲ್ಲ. ವಡ್ರಪಾಳ್ಯ ಗ್ರಾಮ ಠಾಣಾದಲ್ಲಿ ಸೈಟ್ ನಂ.**193, 194/1, 194/2, 171/3, 171/4** ಸೈಟ್ ಗಳು ಇರುತ್ತವೆ ಎಂದರೆ ಸರಿಯಲ್ಲ. ಸೈಟ್ ನಂ. **187/1** ದೊಡ್ಡಜಯಬಸಮ್ಮ ಮಕ್ಕಳು ದಿಃ**03.03.2006** ರಂದು ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಾನು ಹೇಳುವಂತೆ ಇರುವುದಿಲ್ಲ ಪ್ರತಿವಾದಿಗಳ ಸ್ವತ್ತನ್ನು ನಾನು ದಾವಾ ಸ್ವತ್ತು ಎಂದು ಹೇಳಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತು ನಾನು ಹೇಳುವಂತೆ ಅಸ್ತಿತ್ವ ಇರುವುದಿಲ್ಲ ಮತ್ತು ನನ್ನ ದಾವೆಯಲ್ಲಿ ಹೇಳಿದಂತೆ ಸದರಿ ಸ್ವತ್ತಿನಲ್ಲಿ ಎಂದಿಗೂ ಸ್ವಾಧೀನ ಅನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ಎಲ್ಲಾ ದಾಖಲೆಗಳು ಈ ಪ್ರಕರಣಕ್ಕಾಗಿ ನಾನೇ ಸೃಷ್ಟಿಸಿರುವ ದಾಖಲೆಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ನಂಬರ್ ನಾನು ಹಾಜರು ಪಡಿಸಿರುವ ದಾಖಲೆಗೆ ಒಂದ್ಕೊಂದು ತಾಳೆ ಆಗುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ನಾನು ಈ ಮೊದಲು ಯಾರಿಗೂ ಮಾರಾಟ ಮಾಡಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿ ನಾನು **K. Vargees, K. Mathew, Joe Mathew, Andorid** ರವರಿಗೆ ಸಂಬಂಧಿಸಿ ಕ್ರಯ ಪತ್ರವನ್ನು ಹಾಜರು ಪಡಿಸಿರುತ್ತೇನೆ. **K. Vargees** ವರಿಗೆ ನಾನು ಬರೆದುಕೊಟ್ಟಿರುವ ಕ್ರಯದ ಕರಾರು ಪತ್ರದಲ್ಲಿ ದಾವಾ ಸ್ವತ್ತಿನ ಒಟ್ಟು ವಿ. ವನ್ನು ನಮುದಿಸಿಲ್ಲ. ಸದರಿ ಕ್ರಯದ ಕರಾರು ಪತ್ರದಲ್ಲಿ ಪೂರ್ವಕ್ಕೆ ರಾಮಯ್ಯನ ಸ್ವತ್ತು, ಪಶ್ಚಿಮಕ್ಕೆ ಚಂದ್ರಮ್ಮ, ಗೋಪಿ ಮತ್ತು ನಾಗರಾಜ್ ರವರ ಸ್ವತ್ತು, ಉತ್ತರಕ್ಕೆ ನಮ್ಮ ಉಳಿಕೆ ಸ್ವತ್ತು ದಕ್ಷಿಣಕ್ಕೆ ಮುನಿಸ್ವಾಮಿಯ ಸ್ವತ್ತು ಎನ್ನುವ ಚೆಕ್ಕುಬಂದಿ ಇರುತ್ತದೆ ಎಂದರೆ ಸರಿ. ಸದರಿ ಕರಾರು ಪತ್ರವನ್ನು ನಾನು ಪ್ರತಿವಾದಿಗೆ ತೊಂದರೆ ಮಾಡುವ ಉದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು) ಓ. ಹೇ.ಕೇ.ಸ.ಇದೆ.

(ಓಂಕಾರಪ್ಪ. ಆರ್.)
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.